# ಶಂಭುಲಿಂಗ ವಾಲ್ದೊಡ್ಡಿ ಹಾಯಿಕುಗಳು: ಸಹಬಾಳ್ವೆಯ ಆಶಯ

**ಕಿರಣ ವಲ್ಲೇಪುರೆ**

ಮು/ ನಾಗೂರ (ಬಿ), ತಾ/ ಔರಾದ ಜಿ/ ಬೀದರ್.

DOI: https://doi.org/10.5281/zenodo.15343783

## ABSTRACT:

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಜಪಾನಿ ಮೂಲಕ ಕನ್ನಡಕ್ಕೆ ಪರಿಚಯವಾದ 'ಹಾಯಿಕು' ಕನ್ನಡದ ಪ್ರಮುಖ ಕಾವ್ಯ ಪ್ರಕಾರವಾಗಿ ಬೆಳೆದು ಬರುತ್ತಿದೆ. ಕನ್ನಡದ ತ್ರಿಪದಿಯಂತೆಯೆ 'ಹಾಯಿಕು' ಮೂರು ಸಾಲಿನ ಪದ್ಯವಾಗಿದೆ. ಕನ್ನಡದ ಹಿರಿಯ ಲೇಖಕರಾದ ಶಂಭುಲಿಂಗ ವಾಲ್ದೊಡ್ಡಿ ಅವರು 'ಹೊಂಗನಸಿನ ಹಾಯಿಕುಗಳು', 'ಹೊಸ ದಿಗಂತದ ಹಾಯಿಕುಗಳು', 'ವೈಶಾಖದ ಹಾಯಿಕುಗಳು' ಎಂಬ ಹಾಯಿಕು ಸಂಕಲನಗಳನ್ನು ರಚಿಸಿದ್ದಾರೆ. ಪ್ರಸ್ತುತ ಲೇಖನದಲ್ಲಿ ಸಂಭುಲಿಂಗ ವಾಲ್ದೊಡ್ಡಿ ಅವರ ಹಾಯಿಕುಗಳಲ್ಲಿ ವ್ಯಕ್ತಗೊಂಡ ಸಹಬಾಳ್ವೆಯ ಆಶಯವನ್ನು ವಿಶ್ಲೇಷಿಸಲಾಗಿದೆ.

## KEYWORDS:

ಹಾಯಿಕುಗಳು, ಸಹಬಾಳ್ವೆ, ಸೌಹಾರ್ದತೆ, ಭಾವೈಕ್ಯತೆ, ಜೀವನ ಮೌಲ್ಯಗಳು, ಸಾಮಾಜಿಕ ವಿಡಂಬಣೆ.

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಜಪಾನಿ ಮೂಲಕ ಕನ್ನಡಕ್ಕೆ ಪರಿಚಯವಾದ 'ಹಾಯಿಕು' ಕನ್ನಡದ ಪ್ರಮುಖ ಕಾವ್ಯ ಪ್ರಕಾರವಾಗಿ ಬೆಳೆದು ಬರುತ್ತಿದೆ. ಕನ್ನಡದ ತ್ರಿಪದಿಯಂತೆಯೆ 'ಹಾಯಿಕು' ಮೂರು ಸಾಲಿನ ಪದ್ಯವಾಗಿದೆ. ಇಲ್ಲಿ ಮೊದಲ ಸಾಲಿನಲ್ಲಿ ಐದು ಅಕ್ಷರಗಳು, ಎರಡನೆಯ ಸಾಲಿನಲ್ಲಿ ಏಳು ಅಕ್ಷರಗಳು ಮತ್ತು ಮೂರನೆಯ ಸಾಲಿನಲ್ಲಿ ಐದು ಅಕ್ಷರಗಳು ಇರುತ್ತವೆ. ಇದು ಗಾತ್ರದಲ್ಲಿ ಚಿಕ್ಕದಾಗಿದ್ದು ಹಿರಿದಾದ ಅರ್ಥವನ್ನು ಹೊಂದಿರುತ್ತದೆ. ಕನ್ನಡದ ಹಿರಿಯ ಲೇಖಕರಾದ ಶಂಭುಲಿಂಗ ವಾಲ್ದೊಡ್ಡಿ ಅವರು 'ಹೊಂಗನಸಿನ ಹಾಯಿಕುಗಳು', 'ಹೊಸ ದಿಗಂತದ ಹಾಯಿಕುಗಳು', 'ವೈಶಾಖದ ಹಾಯಿಕುಗಳು' ಎಂಬ ಹಾಯಿಕು ಸಂಕಲನಗಳನ್ನು ರಚಿಸಿದ್ದಾರೆ. ಇವರು ಛಂದಸ್ಸಿನಲ್ಲಿ ಹೊಸ ಪ್ರಯೋಗ ಎಂಬಂತೆ ಮಾತ್ರ ವೃತ್ತವನ್ನು ಅಳವಡಿಸಿ ಹಾಯಿಕುಗಳನ್ನು ರಚಿಸಿದ್ದು ವಿಶೇಷವಾಗಿದೆ. ಇವರ ಹಾಯಿಕುಗಳಲ್ಲಿ ಮುಖ್ಯವಾಗಿ 'ಸಹಬಾಳ್ವೆಯ ಆಶಯ' ವ್ಯಕ್ತಗೊಂಡಿದೆ. ಪರಸ್ಪರ ಕೂಡಿ ಬಾಳುವ ಸಂಸ್ಕೃತಿ ಸಮಾಜಕ್ಕೆ ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಇವರ ಹಾಯಿಕುಗಳು ಸಹೃದಯರಿಗೆ ಸಹಬಾಳ್ವೆಯ ಜೀವನ ನಡೆಸಲು ಪ್ರೇರಣೆ ನೀಡುತ್ತವೆ.

'ರಸವೇ ಜನನ, ವಿರಸವೇ ಮರಣ, ಸಮರಸವೇ ಜೀವನ' ಎಂಬ ದ. ರಾ. ಬೇಂದ್ರೆ ಅವರ ಮಾತಿನಂತೆ ಸಮಾಜದಲ್ಲಿ ಜನರು ಪರಸ್ಪರ ಒಬ್ಬರನ್ನೊಬ್ಬರು ಅರಿತು ಸಹಬಾಳ್ವೆಯ ಜೀವನ ನಡೆಸಬೇಕು. ಸಾಮರಸ್ಯದ ಬದುಕು ಸ್ವಾರಸ್ಯದ ಬದುಕು ಕೂಡ ಆಗುತ್ತದೆ. ಈ ರೀತಿಯ ಸಾಮರಸ್ಯದ ಬದುಕಿನಿಂದ ಸಮೃದ್ಧ ದೇಶವನ್ನು ಕಟ್ಟಲು ಸಾಧ್ಯವಾಗುತ್ತದೆ. ಈ ಹಿನ್ನಲೆಯಲ್ಲಿ ಶಂಭುಲಿಂಗ ವಾಲ್ದೊಡ್ಡಿ ಅವರ 'ಹೊಂಗನಸಿನ ಹಾಯಿಕುಗಳು' ಸಂಕಲನದಲ್ಲಿನ ಹಾಯಿಕು ಹೀಗಿದೆ,

**"ನಿತ್ಯ ಅದ್ಭುತ**
**ಸೌಹಾರ್ದದ ಭಾರತ**
**ಇಡೋಣ ಶಾಂತ"**

**(ಹೊಂಗನಸಿನ ಹಾಯಿಕುಗಳು, ಪು–21)**

ನಮ್ಮ ದೇಶ ಸೌಹಾರ್ದದಿಂದ ಕೂಡಿದ್ದು ಇಲ್ಲಿ ಕಲಹಗಳಿಗೆ, ಗಲಭೆಗಳಿಗೆ ಅವಕಾಶ ಮಾಡಿಕೊಡದೆ ಭಾರತವನ್ನು ಶಾಂತವಾಗಿ ಇಡೋಣ ಎಂದು ಕವಿ ಹೇಳುತ್ತಾರೆ. ಇದೆ ಹಿನ್ನಲೆಯಲ್ಲಿ ರಚನೆಯಾದ ಅವರ ಇನ್ನೊಂದು ಹಾಯಿಕು ಹೀಗಿದೆ,

**"ಬಿಡಯ್ಯ ಕೋಪ**
**ಹಚ್ಚುವ ಬಾರೊ ಬೆಪ್ಪ**
**ಶಾಂತಿಯ ದೀಪ"**

**(ಹೊಂಗನಸಿನ ಹಾಯಿಕುಗಳು, ಪು–34)**

ಕೋಪವನ್ನು ಬಿಟ್ಟು ಶಾಂತವಾಗಿ ಬದುಕಬೇಕು ಎಂದು ಕವಿ ಹೇಳುತ್ತಾರೆ. ಇಲ್ಲಿ ಶಾಂತಿಯ ದೀಪ ಬೆಳಗಲು ತಿಳಿಸಲಾಗಿದೆ. ಯಾವ ರೀತಿ ದೀಪ ಕತ್ತಲನ್ನು ಹೊಡೆದೊಡಿಸಿ ಬೆಳಕನ್ನು ನಿಡುತ್ತದೋ ಆ ರೀತಿ ಶಾಂತಿ ನಮ್ಮಲ್ಲಿನ ಕ್ರೋಧವನ್ನು ತೊಲಗಿಸಿ ಬದುಕಿಗೆ ನೆಮ್ಮದಿ ನೀಡುತ್ತದೆ. ನಮ್ಮಲ್ಲಿನ ಶಾಂತಿಯ ಭಾವ ಸೌಹಾರ್ದ ಬದುಕಿಗೆ ಮೂಲವಾಗುತ್ತದೆ.

ಸಮಾಜದಲ್ಲಿ ಜಾತಿ, ಲಿಂಗ, ವರ್ಣದ ಹೆಸರಿನಲ್ಲಿ ತಾರತಮ್ಯ ಕಾಣಸಿಗುತ್ತದೆ. ಈ ರೀತಿಯ ತಾರತಮ್ಯ ಸಮಾಜವನ್ನು ಒಡೆಯುತ್ತದೆ ಮತ್ತು ಸಮಾಜವನ್ನು ಕೆಟ್ಟ ಸ್ಥಿತಿಗೆ ತಂದು ನಿಲ್ಲಿಸುತ್ತದೆ. ಆ ಕಾರಣದಿಂದ ನಾವು ನಮ್ಮಲ್ಲಿನ ಪರಸ್ಪರ ಭೇದ–ಭಾವವನ್ನು ತೊಡೆದು ಹಾಕಿ ಒಂದಾಗಿ ಬಾಳಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ಕವಿ,

**"ಭೇದ ಭಾವವು**
**ಬಿಟ್ಟು, ಕೂಡಿ ಬಾಳುವ**
**ಹಾಡು ಹಾಡುವ"**

**(ಹೊಂಗನಸಿನ ಹಾಯಿಕುಗಳು, ಪು–74)**

ಎಂದು ತನ್ನ ಹಾಯಿಕು ಮೂಲಕ ಜನರಲ್ಲಿ ಏಕತೆಯ ಭಾವವನ್ನು ಮೂಡಿಸಿ ಸಾಮರಸ್ಯದ ಬದುಕನ್ನು ನಡೆಸಲು ಪ್ರೇರೆಪಿಸುತ್ತಾರೆ.

ದೇಶದಲ್ಲಿ ಧರ್ಮ, ಭಾಷೆ ಮತ್ತು ಪ್ರದೇಶದ ಹಿನ್ನಲೆಯಲ್ಲಿ ಶ್ರೇಷ್ಠತೆ ಮತ್ತು ಕನಿಷ್ಠತೆಯ ಭೇದ-ಭಾವ ಹುಟ್ಟಿಕೊಂಡು ಆತಂಕದ ಸ್ಥಿತಿ ಉಂಟಾಗಿದ್ದು; ಇದು ದೇಶದ ಅಭಿವೃದ್ಧಿಗೂ ಮಾರಕವಾಗಿದೆ. ಈ ಭೇದ-ಭಾವದಿಂದ ನಾವು ಹೊರಬಂದು ನಮ್ಮ ಭಾಷೆ, ನಮ್ಮ ಧರ್ಮ ಮತ್ತು ನಮ್ಮ ಪ್ರದೇಶವನ್ನು ಪ್ರೀತಿಸುವುದರ ಜೊತೆಗೆ ಅನ್ಯ ಧರ್ಮ, ಅನ್ಯ ಭಾಷೆ ಮತ್ತು ಅನ್ಯ ಪ್ರದೇಶವನ್ನು ಗೌರವಿಸಬೇಕು. ಈ ಕುರಿತಂತೆ ಅವರ 'ಹೊಸ ದಿಗಂತದ ಹಾಯಿಕುಗಳು' ಸಂಕಲನದಲ್ಲಿನ ಹಾಯಿಕು ಹೀಗಿದೆ,

**"ದೇಶವು ಒಂದು**
**ನಾವು ನಮ್ಮವರೆಂದು**
**ಸಾಗುವ ಮುಂದೆ"**

**(ಹೊಸ ದಿಗಂತದ ಹಾಯಿಕುಗಳು, ಪು-7)**

ಎಂದು ತನ್ನ ಹಾಯಿಕು ಮೂಲಕ 'ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ, ಇವ ನಮ್ಮವ ಇವ ನಮ್ಮವ ಇವನಮ್ಮವನೆಂದೆನಿಸಯ್ಯಾ' ಎಂಬ ಬಸವಣ್ಣನ ವಚನದಂತೆ ಎಲ್ಲರನ್ನೂ ನಮ್ಮವರೆಂದು ತಿಳಿದು ಮುಂದೆ ಸಾಗಬೇಕು ಎಂದು ಕವಿ ಹೇಳುತ್ತಾರೆ.

ನಮ್ಮ ದೇಶ ಪ್ರಾಚೀನ ಕಾಲದಿಂದಲೂ ವೈವಿಧ್ಯತೆಯಲ್ಲಿ ಏಕತೆ, ಏಕತೆಯಲ್ಲಿ ವೈವಿಧ್ಯತೆಯನ್ನು ಪ್ರತಿನಿಧಿಸುವ ದೇಶ. ಇಲ್ಲಿನ ಜನ ತಮ್ಮ ಸಾಮರಸ್ಯದ ಬದುಕಿನಿಂದ ದೇಶವನ್ನು ಕಟ್ಟಿಕೊಂಡು ಬಂದಿದ್ದಾರೆ. ಇಂದು ನಾವು ಆ ರೀತಿಯ ಸಾಮರಸ್ಯದ ಬದುಕನ್ನು ನಡೆಸಬೇಕಾಗಿದೆ. ಈ ಹಿನ್ನಲೆಯಲ್ಲಿ,

**"ಸಾಮರಸ್ಯದ**
**ಗಂಧದಿ ಮಿಂದು ಬಂದ**
**ದೇಶ ನಮ್ಮದು"**

**(ಹೊಸ ದಿಗಂತದ ಹಾಯಿಕುಗಳು, ಪು-41)**

ಎಂದು ಕವಿ ಸಾಮರಸ್ಯದಿಂದ ದೇಶ ಬೆಳೆದು ಬಂದಿದ್ದು ಹಾಗೂ ಇಂದು ನಾವು ಸಾಮರಸ್ಯದಿಂದ ಬದುಕುವುದು ನಮ್ಮ ಜವಾಬ್ದಾರಿ ಎಂಬುದು ತಿಳಿಯಪಡಿಸುತ್ತಾರೆ.

ಮನುಷ್ಯರು ಸಾಮಾನ್ಯವಾಗಿ ಕೆಲವು ವಿಷಯದಲ್ಲಿ ಪರಸ್ಪರ ಭಿನ್ನವಾಗಿರುತ್ತಾರೆ. ಈ ಭಿನ್ನತೆ ಅವರಲ್ಲಿ ಭೇದ-ಭಾವ ಹುಟ್ಟಾಕುತ್ತದೆ. ಮುಂದೆ ಇದು ಪರಸ್ಪರ

ತಾರತಮ್ಯತೆಗೂ ಕಾರಣವಾಗುತ್ತದೆ. ಆದರೆ ನಾವು ಆರೋಗ್ಯಕರವಾಗಿ ಬಾಳಬೇಕಾದರೆ ನಮ್ಮಲ್ಲಿನ ಭೇದ-ಭಾವ ತೊರೆದು ಕೂಡಿ ಬಾಳಬೇಕು. ಈ ಹಿನ್ನಲೆಯಲ್ಲಿ,

**"ಲೋಕವೆ ಜೀವ**
**ಬೇಡವೊ ಭೇದ ಭಾವ**
**ಕೂಡಿ ಬಾಳುವ"**

**(ಹೊಸ ದಿಗಂತದ ಹಾಯಿಕುಗಳು, ಪು-47)**

ಎಂದು ಕವಿ ನಾವು ಪರಸ್ಪರ ಭೇದ-ಭಾವ ಮಾಡದೆ ಕೂಡಿ ಬಾಳಬೇಕೆನ್ನುತ್ತಾರೆ. 'ಕೂಡಿ ಬಾಳಿದರೆ ಸ್ವರ್ಗ ಸುಖ' ಎಂಬ ಗಾದೆಯ ಭಾವ ಈ ಹಾಯಿಕುನಲ್ಲಿದೆ. ಕೂಡಿ ಬಾಳುವುದರಲ್ಲಿ ಭದ್ರತೆ ಹೆಚ್ಚಿರುತ್ತದೆ. ಇದರಿಂದ ಬಾಂಧವ್ಯ ವೃದ್ಧಿಯಾಗಿ ಸುಖಿ ಸಮಾಜದ ನಿರ್ಮಾಣ ಸಾಧ್ಯವಾಗುತ್ತದೆ.

'ಒಗ್ಗಟ್ಟಿನಲ್ಲಿ ಬಲವಿದೆ' ಎಂಬ ಮಾತಿನಂತೆ ಐಕ್ಯತೆಯ ಬದುಕು ನಮ್ಮದಾಗಿದ್ದರೆ ಸಮೃದ್ಧ ದೇಶವನ್ನು ಕಟ್ಟಲು ಸಾಧ್ಯವಾಗುತ್ತದೆ. ಮತ್ತು ಆ ಐಕ್ಯತೆಯು ನಮ್ಮಲ್ಲಿ ಪ್ರೀತಿಯ ಭಾವ ಇದ್ದರೆ ಮಾತ್ರ ಹುಟ್ಟಿಕೊಳ್ಳುತ್ತದೆ. ಈ ಹಿನ್ನಲೆಯಲ್ಲಿ ರಚನೆಯಾದ ಹಾಯಿಕು ಹೀಗಿದೆ,

**"ದ್ವೇಷವು ಬಿಟ್ಟು**
**ಭವ್ಯ ದೇಶವು ಕಟ್ಟು**
**ಸಾಹಸ ಪಟ್ಟು"**

**(ಹೊಸ ದಿಗಂತದ ಹಾಯಿಕುಗಳು, ಪು-65)**

ನಮ್ಮಲ್ಲಿನ ದ್ವೇಷದ ಭಾವವನ್ನು ಬಿಟ್ಟು ಪ್ರೀತಿಯ ಭಾವದಿಂದ ಸೌಹಾರ್ದದ ಬದುಕು ನಡೆಸಿ ಭವ್ಯ ದೇಶವನ್ನು ಕಟ್ಟುವ ಆಶಯ ಈ ಹಾಯಿಕುನಲ್ಲಿದೆ. ಜನರಲ್ಲಿ ಪರಸ್ಪರ ದ್ವೇಷದ ಭಾವ ಹೆಚ್ಚಾದಾಗ ಸಮಾಜದ ಆರೋಗ್ಯ ಹದಗೆಡುತ್ತದೆ. ಪರಸ್ಪರ ಪ್ರೀತಿ, ಸ್ನೇಹದ ಭಾವಗಳು ಮಾತ್ರ ಸಾಮಾಜಿಕ ಆರೋಗ್ಯವನ್ನು ಕಾಪಾಡಲು ಸಾಧ್ಯವಾಗುತ್ತದೆ. ಈ ಹಿನ್ನಲೆಯಲ್ಲಿ ಕವಿ ದ್ವೇಷವನ್ನು ಬಿಟ್ಟು ಭವ್ಯ ಭಾರತವನ್ನು ಕಟ್ಟಲು ಈ ಹಾಯಿಕುನಲ್ಲಿ ಕರೆ ಕೊಟ್ಟಿದ್ದಾರೆ. ಅಲ್ಲದೆ ಭವ್ಯ ದೇಶ ಕಟ್ಟಲು ಕೇವಲ ಪ್ರೀತಿಯಿದ್ದರೆ ಮಾತ್ರ ಸಾಲದು ಅಲ್ಲಿ ಪರಿಶ್ರಮವು ಕೂಡ ಇರಬೇಕು ಎಂಬುದು ಈ ಹಾಯಿಕುವಿನ ಕೊನೆಯ ಸಾಲು ಹೇಳುತ್ತದೆ.

ಲೇಖಕರ 'ವೈಶಾಖದ ಹಾಯಿಕುಗಳು' ಸಂಕಲನದಲ್ಲೂ ಅನೇಕ ಹಾಯಿಕುಗಳು ಸಹಬಾಳ್ವೆಯ ಆಶಯವನ್ನು ಹೊಂದಿವೆ. ಅಲ್ಲಿನ ಒಂದು ಹಾಯಿಕು ಹೀಗಿದೆ,

**“ನಾವು ನಮ್ಮವ**
**ಎಂಬುವ ಶುದ್ಧ ಭಾವ**
**ಶಾಂತಿಯ ಜೀವ”**

**(ವೈಶಾಖದ ಹಾಯಿಕುಗಳು, ಪು–31)**

ಎಲ್ಲರೂ ನಮ್ಮವರೆಂದು ತಿಳಿದು ಬದುಕಬೇಕು ಎಂದು ಹೇಳುತ್ತಾರೆ. ಎಲ್ಲರು ನಮ್ಮವರೆಂದು ತಿಳಿದು ಕೂಡಿ ಬಾಳಿದರೆ ಮಾತ್ರ ಸಮಾಜದಲ್ಲಿ ಶಾಂತಿ ನೆಲೆಸಲು ಸಾಧ್ಯವಾಗುತ್ತದೆ. ಇದೆ ಹಿನ್ನಲೆಯಲ್ಲಿ ರಚನೆಯಾದ ಇನ್ನೊಂದು ಹಾಯಿಕು ಹೀಗಿದೆ,

**“ನಾವು ನಮ್ಮೊರು**
**ಭಾವ ಬಂಧನ ಧಾರೆ**
**ಬಾಳಿಗಾಸರೆ”**

**(ವೈಶಾಖದ ಹಾಯಿಕುಗಳು, ಪು–39)**

ನಾವು ನಮ್ಮವರು ಎಂಬ ಭಾವವನ್ನು ನಾವು ಬೆಳೆಸಿಕೊಳ್ಳಬೇಕು. ಈ ಭಾವ ನಮ್ಮ ಬಂಧನವನ್ನು ಗಟ್ಟಿಗೊಳಿಸುತ್ತದೆ ಮತ್ತು ಆ ಮೂಲಕ ಬದುಕಿಗೆ ಆಸರೆ ಆಗುತ್ತದೆ. ‘ಸಕಲ ಜೀವಾತ್ಮರಿಗೆ ಲೇಸು ಬಯಸಬೇಕು’ ಎಂಬ ಶರಣರ ಮಾತಿನ ಭಾವ ಈ ಹಾಯಿಕುಗಳಲ್ಲಿ ವ್ಯಕ್ತಗೊಂಡಿದೆ.

ಈ ಮೇಲಿನ ಎಲ್ಲಾ ಹಾಯಿಕುಗಳನ್ನು ಗಮನಿಸಿದಾಗ ಜನರು ಸಹಬಾಳ್ವೆಯ ಜೀವನ ನಡೆಸಲು ಬದುಕಿನಲ್ಲಿ ಕೆಲವೊಂದು ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಲೇಖಕರು ಸಲಹೆ ಕೊಟ್ಟಿದ್ದು ಕಂಡುಬರುತ್ತದೆ. ಅವುಗಳಲ್ಲಿ ಮುಖ್ಯವಾಗಿ ಪರಸ್ಪರರಲ್ಲಿನ ಭೇದ–ಭಾವವನ್ನು ಬಿಡಬೇಕು, ಎಲ್ಲರು ನಮ್ಮವರೆಂದು ತಿಳಿಯಬೇಕು, ಪರಸ್ಪರ ಕಷ್ಟ–ಸುಖಕ್ಕೆ ಸಹಾಯಕವಾಗಬೇಕು, ನಮ್ಮಲ್ಲಿನ ದ್ವೇಷದ ಭಾವವನ್ನು ಬಿಡಬೇಕು ಮತ್ತು ಶಾಂತಿ ಭಾವವನ್ನು ಅಳವಡಿಸಿಕೊಳ್ಳಬೇಕು. ಈ ರೀತಿಯ ಜೀವನ ಮೌಲ್ಯಗಳಿಂದ ನಾವು ಸಹಬಾಳ್ವೆಯ ಜೀವನ ನಡೆಸಲು ಸಾಧ್ಯವಾಗುತ್ತದೆ. ಇನ್ನೂ ಕೆಲವು ಹಾಯಿಕುಗಳಲ್ಲಿ ಪರಸ್ಪರರಲ್ಲಿ ಹಂಚಿ ತಿನ್ನುವ ಗುಣ ಬೆಳೆಸಿಕೊಳ್ಳಲು ತಿಳಿಸಲಾಗಿದೆ. ಇದಕ್ಕೆ ಕವಿ ಪ್ರಾಣಿಗಳ ಉದಾಹರಣೆಯನ್ನು ಕೂಡ ನೀಡಿದ್ದಾರೆ. ಹಂಚಿ ತಿನ್ನುವ ಕಾಗೆಯ ಗುಣವನ್ನು ಸ್ಮರಿಸಿದ್ದಾರೆ. ಉಳಿದಂತೆ ಕೆಲವು ಹಾಯಿಕುಗಳಲ್ಲಿ ಸಮಕಾಲೀನ ಸಾಮಾಜಿಕ ಮತ್ತು ರಾಜಕೀಯ ವಿದ್ಯಾಮಾನಗಳನ್ನು ಕವಿ ಕಟುವಾಗಿ ಟೀಕಿಸಿದ್ದಾರೆ. ಆ ಟೀಕೆಗಳ ಹಿಂದೆ ಕೂಡ ಸಹಬಾಳ್ವೆಯ ಆಶಯವೇ ಇದೆ.

ಹೀಗೆ ಶಂಭುಲಿಂಗ ವಾಲ್ದೊಡ್ಡಿ ಅವರ ಹಾಯಿಕುಗಳಲ್ಲಿ ಸಹಬಾಳ್ವೆಯ ಆಶಯ ವ್ಯಕ್ತಗೊಂಡಿದೆ. ಸ್ವಾರ್ಥಕ್ಕಾಗಿ ಸಮಾಜವನ್ನು ಒಡೆಯುವ ಕೆಟ್ಟ ಶಕ್ತಿಗಳಿಂದ

ದೂರವಿದ್ದು, ಬುದ್ಧ-ಬಸವ-ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಅಳವಡಿಸಿಕೊಂಡು ಸಹಬಾಳ್ವೆಯ ಜೀವನ ನಡೆಸಬೇಕು ಎಂಬುದು ಇಲ್ಲಿನ ಹಾಯಿಕುಗಳ ಮುಖ್ಯ ಆಶಯವಾಗಿ ಕಂಡುಬರುತ್ತದೆ. ಸುತ್ತಲಿನ ಸಮಾಜವನ್ನು ಸೂಕ್ಷ್ಮವಾಗಿ ಗ್ರಹಿಸಿ ಅಲ್ಲಿನ ವಿದ್ಯಾಮಾನಗಳನ್ನು, ತಲ್ಲಣಗಳನ್ನು ತಮ್ಮ ಹಾಯಿಕುಗಳಲ್ಲಿ ಲೇಖಕರು ಸರೆಹಿಡಿದಿದ್ದಾರೆ. ಅಲ್ಲದೆ ತಮ್ಮ ಹಾಯಿಕುಗಳ ಮೂಲಕ ಸಹೃದಯರಲ್ಲಿ ವೈಚಾರಿಕ ದೃಷ್ಟಿಕೋನ ಬೆಳೆಸಲು ಪ್ರಯತ್ನಿಸಿದ್ದಾರೆ. ಸಮಕಾಲೀನ ಸಾಮಾಜಿಕ ವಿಮರ್ಶೆಯೊಂದಿಗೆ ಸಮಸಮಾಜದ ಹಂಬಲ ಇಲ್ಲಿನ ಹಾಯಿಕುಗಳಲ್ಲಿದೆ.

**ಪರಾಮರ್ಶನ ಗ್ರಂಥಗಳು:**


1. ಶಂಭುಲಿಂಗ ವಾಲ್ದೊಡ್ಡಿ, (2019), ಹೊಂಗನಸಿನ ಹಾಯಿಕುಗಳು, ಶೋಭಾ ಕಲೆ, ಸಾಹಿತ್ಯ ಸಂಗೀತ ಮತ್ತು ಸಾಂಸ್ಕೃತಿಕ ಟ್ರಸ್ಟ್ (ರಿ. ), ಬೀದರ.
2. ಶಂಭುಲಿಂಗ ವಾಲ್ದೊಡ್ಡಿ, (2020), ಹೊಸ ದಿಗಂತದ ಹಾಯಿಕುಗಳು, ಶೋಭಾ ಕಲೆ, ಸಾಹಿತ್ಯ ಸಂಗೀತ ಮತ್ತು ಸಾಂಸ್ಕೃತಿಕ ಟ್ರಸ್ಟ್ (ರಿ. ), ಬೀದರ.
3. ಶಂಭುಲಿಂಗ ವಾಲ್ದೊಡ್ಡಿ, (2021), ವೈಶಾಖದ ಹಾಯಿಕುಗಳು, ಶೋಭಾ ಕಲೆ, ಸಾಹಿತ್ಯ ಸಂಗೀತ ಮತ್ತು ಸಾಂಸ್ಕೃತಿಕ ಟ್ರಸ್ಟ್ (ರಿ. ), ಬೀದರ.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.

**About the License:**


© The Authors 2024. The text of this article is open access and licensed under a Creative Commons Attribution 4.0 International License.